ಶ್ರೀ ಎಸ್. ಬಂಗಾರಪ್ಪ.—ಮುಂದೆ ಬಜೆಟ್ಟಿನಲ್ಲಿ ಸೇರಿಸಿ ಕೆಲಸ ಮಾಡಿಸಿಕೊಡುವ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ.—ಎರಡನೇ ಪ್ರಶ್ನೆಗೆ ಉತ್ತರವಾಗಿ ತಿಪಟೂರಿನಿಂದ ಚನ್ನರಾಯಪಟ್ಟಣರಸ್ತೆ ಯಡಿಯೂರಿಗೆ ಸೇರುವಂತೆ ಅಂದರೆ ಮತ್ತಿಘಟ್ಟ, ಸೂಗೂರು, ಬೋಚಿಹಳ್ಳಿ, ಹೊನ್ನೇನಹಳ್ಳಿಮಾರ್ಗದ ತಿಪಟೂರು ರಸ್ತೆಯನ್ನು ಉತ್ತಮಪಡಿಸಲು ಅಂದಾಜನ್ನು ತಯಾರಿಸಲಾಗುತ್ತಿದೆ. ಉತ್ತಮಪಡಿಸಲು ಸರಿ ಸುಮಾರು ೭ ಲಕ್ಷ ರೂಪಾಯಿಗಳ ವೆಚ್ಚವಾಗುತ್ತದೆ ಎಂದು ತಿಳಿಸಿದ್ದೀರಿ. ಈ ಅಂದಾಜು ಯಾವಾಗ ಆಯಿತು ? ಅಂದಾಜು ತಯಾರು ಮಾಡಿಸುವುದು ಮಾತ್ರ ನಿಮ್ಮ ಕೆಲಸವೇ ಆಥವಾ ಕೆಲಸ ಮಾಡಿಸುವ ಪ್ರವೃತ್ತಿಯೇನಾದರೂ ಸರ್ಕಾರಕ್ಕಿದೆಯೇ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ೧೯೭೫ನೇ ಸಾಲಿನಲ್ಲಿ ಅಂದಾಜಾಗಿರತಕ್ಕದ್ದು. ಚನ್ನರಾಯ ಪಟ್ಟಣ—ಯಡಿಯೂರು ರಸ್ತೆ ಕೆಲಸ ಏನಿದೆ ಇದನ್ನು ಹಂತಹಂತವಾಗಿ ತೆಗೆದುಕೊಳ್ಳಬೇಕೆಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಆ ಪ್ರಕಾರ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಎಲ್. ಶಿವಪ್ಪ.—ಹಂತಹಂತವಾಗಿ ಅಂದರೆ ಏನು, ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ.—ಒಂದು ಕಿಲೋಮೀಟರ್ ರಸ್ತೆ ಇದ್ದರೆ ಅರ್ಧ ಕಿಲೋಮೀಟರ್ ಮಾಡಿ ಮುಂದೆ ಇನ್ನರ್ಧ ಕಿಲೋಮೀಟರ್ ರಸ್ತೆ ಮಾಡಿಸುವುದು. ೫೦ ಕಿಲೋಮೀಟರ್ ಇದ್ದರೆ ೧೦-೧೦ ಕಿಲೋಮೀಟರ್ ರಸ್ತೆ ಮಾಡಿಸುವುದಕ್ಕೆ ಕ್ರಮ ತೆಗೆದುಕೊಂಡು ಪೂರ್ತಿ ಮಾಡಿಸುವುದು. ಇದಕ್ಕೆ ಹಂತ ಹಂತ ಎಂದು ಹೆಸರು

N.R.W.S. Scheme at Javagal, Arasikere Taluk

568 SRI HARANAHALLI RAMASWAMY (Gandsi).—Will the Minister for Rural Development and Panchayati Raj be pleased to State.—

[*a*] the stage at which the National Water Supply Scheme at Javagal. Arasikere Taluk stands at present ;

(*b*) when did the work commence :

(*c*) whether the Government is aware that the pipes already used have rusted and became useless ?

SRI K. PRABHAKAR (Minister for rural Development and Panchayati Raj).—

(*a*) All civil portions of the work except over head tank have been completed and water is being supplied to the villagers by direct pumping by erecting a pumpset to one bore well sunk in the village. Action is also being taken to sink another borewell in the village.

(*b*) During 1973.

(*c*) No.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಸ್ವಾಮಿ, ಅರಸೀಕೆರೆ ತಾಲೂಕು ಜವಗಲ್‌ನ ರಾಷ್ಟ್ರೀಯ ನೀರು ಸರಬರಾಜು ಯೋಜನೆಗೆ ಖರ್ಚು ಮಾಡಿರುವ ಹಣ ಎಷ್ಟು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ

† ಶ್ರೀ ಕೆ. ಪ್ರಭಾಕರ್.—ಕಂಟ್ರಾಕ್ಟರ್ ಕೆಲಸವನ್ನು ಮಾಡದೇ ಬಿಟ್ಟುಬಿಟ್ಟಿದ್ದಾನೆ. ಆದ. ಒಂದು ಲಕ್ಷ ಚಿಲ್ಲರೆ ಎಸ್ಟಿಮೇಟ್ ಇದೆ. ಈಗ ಆದರಲ್ಲಿ ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ವಿವರ ಇಲ್ಲ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಸ್ವಾಮಿ, ಕೆಲಸ ನಿಂತುಹೋಗಿದೆ ಎಂದು ಮಾನ ಮಂತ್ರಿಗಳು ತಿಳಿಸಿದ್ದಾರೆ. ಯಾತಕ್ಕೆ ಕೆಲಸ ನಿಂತುಹೋಯಿತಂ ಎಂಬುದನ್ನು ಹೇಳುತ್ತಾರೆಯೆ ?

ಶ್ರೀ ಕೆ. ಪ್ರಭಾಕರ್.—ಕಂಟ್ರಾಕ್ಟರ್ ಏಕಾಏಕಿ ಕೆಲಸವನ್ನು ನಿಲ್ಲಿಸಿದ್ದಾನೆ. ಆ ಬಗ್ಗೆ ಇನ್ಸ್‌ವೆಸ್ಟಿಗೇಟ್ ಮಾಡುತ್ತಿದ್ದೇವೆ ಆ ಕೆಲಸವನ್ನು ಬೇರೆಯವರಿಗೆ ವಹಿಸಿ ಕೆಲಸ ಮಾಡುವುದಕ್ಕೆ ಏರ್ಪಾಟು ಮಾಡಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಸ್ವಾಮಿ, ಇಲಾಖೆಯವರು ನಿಜವಲ್ಲದ ಸಂಗತಿಯನ್ನು ಹೇಳಿದ್ದಾರೆ. ಒಂದು ವಾರದಿಂದ ನಾನು ಆ ಊರಿನಲ್ಲಿದ್ದೆ. ಆ ಗ್ರಾಮದಲ್ಲಿ ಕೆಲಸ ನಡೆದಿಲ್ಲ ಒಂದು ಹನಿ ನೀರೂ ಕೂಡ ಬಂದಿಲ್ಲ. ಮಾನ್ಯ ಮಂತ್ರಿಗಳು ಪರೀಕ್ಷೆ ಮಾಡಿ ಅಧಿಕಾರಿಗಳು ಸುಳ್ಳು ವರದಿಯನ್ನು ನೀಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಕೂಡಲೇ ವಿಚಾರಣೆ ಮಾಡಿ ವಡದಿ ಸರಿಯಾಗಿಲ್ಲದಿದ್ದರೆ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಈ ಕಾಮಗಾರಿಯನ್ನು ಮುಗಿಸುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆಂಬುದನ್ನಾದರೂ ಹೇಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಇದು ಒಂದು ಲಕ್ಷ ಚಿಲ್ಲರೆ ರೂಪಾಯಿನ ಕೆಲಸ ಅದಷ್ಟು ಜಾಗ್ರತೆ ವಂಗಿಸುತ್ತೇವೆ. ಆದರೆ ಇಷ್ಟೇ ದಿವಸದಲ್ಲಿ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಈ ಕೆಲಸವನ್ನು ಬೇಗ ಮಾಡಿ ಮುಗಿಸಬೇಕು ಎಂಬ ಆಸೆ ಸರ್ಕಾರಕ್ಕಿದರೆ ಇಷ್ಟು ಹೊತ್ತಿಗೆ ಮಾಡಬಹುದಾಗಿತ್ತು. ಈಗ ನಡೆಯುತ್ತಿರುವ ಕೆಲಸ ಯಾವುದೂ ಸರಿಯಾಗಿ ನಡೆಯುತ್ತಿಲ್ಲ. ಇದನ್ನಾದರೂ ತಕ್ಷಣ ಮಾಡಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಅದಷ್ಟು ಜಾಗ್ರತೆ ಕೆಲಸ ಮುಗಿಸುತ್ತೇವೆ.

Power Supply to X-Ray Plant at Gulbarga.

726 SRI M. Y. PATIL (Afzalpur).—Will the Minister of State for Information and Youth Services be pleased to state.—

(*a*) whether the Assistant Executive Engineer (Electrical) KEB, Gulbarga has not given power supply to the X-Ray Plant installed at Karnataka Co-operative Hospital Ltd., Station Bazaar, Gulbarga, even though all the formalities have been completed and also power is sanctioned:

(*b*) whether the Assistant Engineer, Executive Engineer and also Superintending Engineer KEB Gulbarga have shown partisan attitude and sided en individual. and harassing the Co-operative Hospital which is the first of its kind in this backward area and aims to serve the poor and needy persons of this area :

(*c*) If so, what action Government intends to take against the above officers who are fully siding individual in the above said matter ?

SRI K. H. SRINIVAS (Minister of State for Information and Youth Services).—

(*a*) Power supply to the X-Ray plant has been given on 24th January 1979.